# ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ

ಮಾನ್ಯ ಶ್ರೀ **ನೀಲಪ್ಪ ಈರಪ್ಪ ಹತ್ತಿ,** ಅಧ್ಯಕ್ಷರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ ಇವರ ಅಧ್ಯಕ್ಷತೆಯಲ್ಲಿ 21-11-2020 ರಂದು **ಶನಿವಾರ 11-30 ಗಂಟೆಗೆ** ಜರುಗಿದ ಸಮಿತಿಯ ಸಾಮಾನ್ಯ ಸಭೆಯ ನಡುವಳಿಕೆಗಳು.

**ಸಭೆಗೆ ಹಾಜರಿದ್ದ ಸದಸ್ಯರು**

| ಅ.ನಂ | ಹೆಸರು | ಹುದ್ದೆ |
|---|---|---|
| 1 | ಶ್ರೀ ನೀಲಪ್ಪ ಈರಪ್ಪ ಹತ್ತಿ | ಅಧ್ಯಕ್ಷರು |
| 2 | ಶ್ರೀ ಸೋಮಪ್ಪ ಮೇಘಪ್ಪ ಲಮಾಣಿ | ಉಪಾಧ್ಯಕ್ಷರು |
| 3 | ಶ್ರೀ ಗುಡದಯ್ಯ ರಾಮಪ್ಪ ಕೊಪ್ಪದ | ಸದಸ್ಯರು |
| 4 | ಶ್ರೀ ಮಲ್ಲನಗೌಡ ಶಂಕರಗೌಡ ಪಾಟೀಲ | ,, |
| 5 | ಶ್ರೀ ಷಣ್ಮುಖಗೌಡ ಪ್ರಭುಗೌಡ ಪಾಟೀಲ | ,, |
| 6 | ಶ್ರೀಮತಿ ಮುತ್ತವ್ವ ಪರಸಪ್ಪ ಮಾಗಡಿ | ,, |
| 7 | ಶ್ರೀ ವೆಂಕರಡ್ಡಿ ಬಸವರಡ್ಡಿ ಸ.ಹೊಂಬಳ | ,, |
| 8 | ಶ್ರೀಮತಿ ಪಕ್ಕವ್ವ ಯಲ್ಲಪ್ಪ ಜೋಗಿ | ,, |
| 9 | ಶ್ರೀ ರಾಜಶೇಖರಪ್ಪ ಮಹಾಲಿಂಗಪ್ಪ ಕರೆಣ್ಣವರ | ,, |
| 10 | ಶ್ರೀ ಯಲ್ಲಪ್ಪಗೌಡ ಅಮೃತಗೌಡ ಉದ್ದನಗೌಡ್ರ | ,, |
| 11 | ಶ್ರೀ ವೀರುಪಾಕ್ಷಪ್ಪ ಮಹದೇವಪ್ಪ ಮೇಟಿ | ನಾಮ ನಿರ್ದೇಶಿತ ಸದಸ್ಯರು |
| 12 | ಶ್ರೀ ಚಂದ್ರಶೇಖರ ಮಹದೇವಪ್ಪ ತಳವಾರ | ,, |

**ಸಭೆಗೆ ಹಾಜರಿದ್ದ ಅಧಿಕಾರಿಗಳು**

| ಅ.ನಂ | ಹೆಸರು | ಹುದ್ದೆ |
|---|---|---|
| 1 | ಕಾರ್ಯದರ್ಶಿಗಳು, ಕೃಉಮಾಸ, ಲಕ್ಷ್ಮೇಶ್ವರ | ಕಾರ್ಯದರ್ಶಿಯವರು |

**ಸಭೆಗೆ ಗೈರ ಹಾಜರಿದ್ದ ಅಧಿಕಾರಿಗಳು**

| ಅ.ನಂ | ಹೆಸರು | ಹುದ್ದೆ |
|---|---|---|
| 1 | ಮಾನ್ಯ ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಗದಗ. | ಇಲಾಖಾ ಪ್ರತಿನಿಧಿ |

**ಸಭೆಗೆ ಗೈರ ಹಾಜರಿದ್ದ ಸದಸ್ಯರು**

| ಅ.ನಂ | ಹೆಸರು | ಹುದ್ದೆ |
|---|---|---|
| 1 | ಶ್ರೀ ಸುರೇಶ ವೀರಭದ್ರಪ್ಪ ಬಳ್ಳಾರಿ | ಸದಸ್ಯರು |
| 2 | ಶ್ರೀ ಓಂಪ್ರಕಾಶ ಪುಕರಾಜ ಜೈನ | ,, |
| 3 | ಶ್ರೀ ಪುಲಕೇಶಿ ಗೂಳಪ್ಪ ಉಪನಾಳ | ,, |
| 4 | ಶ್ರೀಮತಿ ಸವಿತಾ ರಾಜಶೇಖರ ಭಾವಿಕಟ್ಟಿ | ನಾಮ ನಿರ್ದೇಶಿತ ಸದಸ್ಯರು |

ವಿಷಯ ನಂ-1) ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವ ಕುರಿತು ವಿಚಾರ.

ಠರಾವ ನಂ-1) ದಿನಾಂಕ: 10-09-2020 ರಂದು ಜರುಗಿದ ಸಾಮಾನ್ಯ ಸಭೆಯ ನಡುವಳಿಕೆಗಳನ್ನು ಓದಲಾಯಿತು. ಅವೆಲ್ಲವು ಸರಿ ಇದ್ದುದರಿಂದ ಒಪ್ಪಿ ದೃಢೀಕರಿಸಲಾಯಿತು.

ಸೂಚಕರು: ಶ್ರೀ ಸೋಮಪ್ಪ ಮೇಘಪ್ಪ ಲಮಾಣಿ
ಅನುಮೋದಕರು: ಶ್ರೀ ಗುಡದಯ್ಯ ರಾಮಪ್ಪ ಕೊಪ್ಪದ

ವಿಷಯ ನಂ–2) 2020–21 ನೇ ಸಾಲಿನ ಸಪ್ಟಂಬರ್ ಹಾಗೂ ಅಕ್ಟೋಬರ ತಿಂಗಳ ಸಮಿತಿಯ ಆದಾಯ, ವೆಚ್ಚದ ಪತ್ರಿಕೆ ಪರಿಶೀಲಿಸಿ ಮಂಜೂರಾತಿ ನೀಡುವ ಕುರಿತು.

ಠರಾವ ನಂ–2) 2020–21 ನೇ ಸಾಲಿನ ಸಪ್ಟಂಬರ್ ಹಾಗೂ ಅಕ್ಟೋಬರ ತಿಂಗಳ ಈ ಕೆಳಗಿನಂತಿರುವ ಆದಾಯ ಮತ್ತು ವೆಚ್ಚದ ತಃಖ್ತೆಯನ್ನು ಪರಿಶೀಲಿಸಿ ಒಪ್ಪಲಾಯಿತು.

**2020 ನೇ ಸಾಲಿನ ಸಪ್ಟಂಬರ್** ತಿಂಗಳಿನ ಆದಾಯ ವೆಚ್ಚದ ವಿವರಣಾತ್ಮಕ ತ:ಖ್ತೆ

| ಕ್ರ ಸಂ | ಆದಾಯ | ಮೊತ್ತ | ಕ್ರ ಸಂ | ವೆಚ್ಚ | ಮೊತ್ತ |
|---|---|---|---|---|---|
| 1 | ಅ) ಮಾರುಕಟ್ಟೆ ಶುಲ್ಕ<br>ಬ) ಜಾನುವಾರು ಮಾ.ಶುಲ್ಕ | 2846340–00<br>420–00 | 1 | ರಾಜ್ಯ ಸಂಚಿತ ನಿಧಿ ವಂತಿಕೆ (ಜೂನ್ 2020 ರಿಂದ ಅಗಷ್ಟ 2020 ತಿಂಗಳ) | 570393–00 |
| | ಒಟ್ಟು ರೂ. | **2846760–00** | 2 | ಕೃಷಿ ಮಾರಾಟ ಮಂಡಳಿ ವಂತಿಕೆ ಜೂನ್ 2020 ರಿಂದ ಅಗಷ್ಟ 2020 ತಿಂಗಳ) | 218907–00 |
| 2 | ಶುದ್ಧ ನೀರಿನ ಘಟಕ | 9142–00 | 3 | ಕೃಷಿ ವಿಶ್ವ ವಿದ್ಯಾಲಯ ವಂತಿಕೆ ಜೂನ್ 2020 ರಿಂದ ಅಗಷ್ಟ 2020 ತಿಂಗಳ) | 38026–00 |
| 3 | ಲೀವ್ & ಲೈಸನ್ಸ್ ಫೀ | 81195–00 | 4 | ಆವರ್ತ ನಿಧಿ ವಂತಿಕೆ ಜೂನ್ 2020 ರಿಂದ ಅಗಷ್ಟ 2020 ತಿಂಗಳ) | 1628591–00 |
| 4 | ಲೈಸನ್ಸ್ ಫೀ | 7000–00 | 5 | ಭದ್ರತಾ ಸಿಬ್ಬಂದಿ ವೆಚ್ಚ (2020 ಅಗಷ್ಟ ತಿಂಗಳ) | 209415–00 |
| 5 | ಫಾರ್ಮ ಫೀ | 2000–00 | 6 | ಅಧ್ಯಕ್ಷರ/ಉಪಾಧ್ಯಕ್ಷರ ಗೌರವ ಧನ | 4500–00 |
| 6 | ದಂಡ | 2565–00 | 7 | ಸದಸ್ಯರ ಸಭಾಭತ್ಯ, ಪ್ರವಾಸಭತ್ಯ & ಸಿಟಿಂಗ್ ಫೀ | 8888–00 |
| 7 | ಇತರೆ | 177–00 | 8 | ಸಭೆಯ ವೆಚ್ಚ | 3000–00 |
| | | | 9 | ಮಾರುಕಟ್ಟೆ ಪ್ರಾಂಗಣ ಉಸ್ತುವಾರಿ | 600–00 |
| | | | 10 | ಕಛೇರಿ ನಿರ್ವಹಣೆ | 5339–00 |
| | | | 11 | ಭೂ ಕರ ದರ ಇತ್ಯಾದಿ | 1100–00 |
| | | | 12 | ದಿನಪತ್ರಿಕೆ | 2435–00 |
| | | | 13 | ಅಂಚೆತಂತಿ ವೆಚ್ಚ | 1000–00 |
| | | | 14 | ಸಾದಿಲ್ವಾರ ವೆಚ್ಚ | 815–52 |
| | | | 15 | ದೂರವಾಣಿ ವೆಚ್ಚ | 3890–00 |
| | | | 16 | ವಿದ್ಯುತ್ ವೆಚ್ಚ | 24250–00 |
| | | | 17 | ಜೀಪ ಇಂಧನ & ದುರಸ್ತಿ | 2500–00 |
| | **ಒಟ್ಟು ರೂ.** | **29,48,839–00** | | **ಒಟ್ಟು ರೂ.** | **2723649–52** |
| | **ಕೊರತೆ** | –– | | **ಉಳಿತಾಯ** | **2,25,189–48** |
| | **ಅಂತೂ** | **29,48,839–00** | | **ಅಂತೂ** | **29,48,839–00** |

**2020 ನೇ ಸಾಲಿನ ಅಕ್ಟೋಬರ್** ತಿಂಗಳಿನ ಆದಾಯ ವೆಚ್ಚದ ವಿವರಣಾತ್ಮಕ ತ:ಖ್ತೆ

| ಕ್ರ ಸಂ | ಆದಾಯ | ಮೊತ್ತ | ಕ್ರ ಸಂ | ವೆಚ್ಚ | ಮೊತ್ತ |
|---|---|---|---|---|---|
| 1 | ಅ) ಮಾರುಕಟ್ಟೆ ಶುಲ್ಕ 0.35 ಪೈಸೆ | 636994–00 | 1 | ಭದ್ರತಾಸಿಬ್ಬಂದಿ ವೆಚ್ಚ (2020ಸಪ್ಟಂಬರ್ತಿಂಗಳ) | 103994–00 |
| | ಬ) ಜಾನುವಾರು ಮಾ.ಶುಲ್ಕ | 416–00 | 2 | ಅಧ್ಯಕ್ಷರ / ಉಪಾಧ್ಯಕ್ಷರ ಗೌರವ ಧನ | 4500–00 |
| 2 | ಶುದ್ಧ ನೀರಿನ ಘಟಕ | 8180–00 | 3 | ಮಾರುಕಟ್ಟೆ ಪ್ರಾಂಗಣ ಉಸ್ತುವಾರಿ | 16068–00 |
| 3 | ಲೀವ್ & ಲೈಸನ್ಸ್ ಫೀ | 93586–00 | 4 | ಕಛೇರಿ ನಿರ್ವಹಣೆ | 26538.00 |
| 4 | ದಂಡ | 6933–00 | 5 | ಮುದ್ರಣ & ಲೇಖನ ಸಾಮಗ್ರಿ | 4555–00 |
| 5 | ಇತರೆ | 603–00 | 6 | ಭೂ ಕರ ದರ ಇತ್ಯಾದಿ | 1500–00 |
| | | | 7 | ದಿನಪತ್ರಿಕೆ | 150–00 |
| | | | 8 | ಸಾದಿಲ್ವಾರ ವೆಚ್ಚ | 15106–00 |
| | | | 9 | ದೂರವಾಣಿ ವೆಚ್ಚ | 3891–00 |
| | | | 10 | ವಿದ್ಯುತ್ ವೆಚ್ಚ | 18943–00 |
| | | | 11 | ಜೀಪ ಇಂಧನ & ದುರಸ್ತಿ | 42799–00 |
| | **ಒಟ್ಟು ರೂ.** | **746712–00** | | **ಒಟ್ಟು ರೂ.** | **233544–00** |
| | **ಕೊರತೆ** | – | | **ಉಳಿತಾಯ** | **513168–00** |
| | **ಅಂತೂ** | **746712–00** | | **ಅಂತೂ** | **746712–00** |

ಸೂಚಕರು: ಶ್ರೀ ಮಲ್ಲನಗೌಡ ಶಂಕರಗೌಡ ಪಾಟೀಲ

ಅನುಮೋದಕರು: ಶ್ರೀ ಷಣ್ಮುಖಗೌಡ ಪ್ರಭುಗೌಡ ಪಾಟೀಲ

ವಿಷಯ ನಂ-3) ನಿಯಮ-71 ರಡಿ ಕೃಉಮಾಸ ಲಕ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಹಳೇಯ ಕ್ಯಾಂಟೀನ್ ಕಟ್ಟಡವನ್ನು ದುರಸ್ತಿಗೊಳಿಸಿ ಸುಣ್ಣ ಬಣ್ಣ ಹಚ್ಚುವ ಕಾಮಗಾರಿ ಭಾಗ-1 ಹಾಗೂ ಭಾಗ-2 ರ ಕಾಮಗಾರಿಗೆ ಬಂದ ಟೆಂಡರ್‌ಗಳನ್ನು ಒಪ್ಪಿ ದೃಢೀಕರಿಸುವುದು.

ಠರಾವ ನಂ-3) ದಿನಾಂಕ: 16-06-2020 ರಂದು ಜರುಗಿದ ಸಮಿತಿ ಸಭೆಯ ಠರಾವ ಸಂಖ್ಯೆ-4 ರಲ್ಲಿ ತೀರ್ಮಾನಿಸಿದಂತೆ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗದಗ ಇವರು ತಯಾರಿಸಿಕೊಟ್ಟ ಅಂದಾಜು ಪತ್ರಿಕೆಯನ್ವಯ ನಿಯಮ 71 ರಡಿಯಲ್ಲಿ ಈ ಕೆಳಕಂಡ ಒಟ್ಟು 02 ಕಾಮಗಾರಿಯನ್ನು ಈ ಸಮಿತಿಯ ಟೆಂಡರ ಪ್ರಕಟಣೆ ಸಂಖ್ಯೆ/ಕೃಉಮಾಸ(ಲ)/489/2020-21, ದಿನಾಂಕ: 31-08-2020 ರ ಮೂಲಕ ಟೆಂಡರನ್ನು ಆಹ್ವಾನಿಸಲಾಗಿತ್ತು. ಸದರಿ ಟೆಂಡರ ಪ್ರಕಟಣೆಯನ್ವಯ ಟೆಂಡರನಲ್ಲಿ ಈ ಕೆಳಕಂಡ ಗುತ್ತಿಗೆದಾರರು ಭಾಗವಹಿಸಿದ್ದು, ವಿವರ ಈ ಕೆಳಗಿನಂತಿರುತ್ತದೆ.

**ಕಾಮಗಾರಿ ಹೆಸರು:1) ಕೃಉಮಾಸ ಲಕ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಹಳೇಯ ಕ್ಯಾಂಟೀನ್ ಕಟ್ಟಡವನ್ನು ದುರಸ್ತಿ/ಸುಧಾರಣೆಗೊಳಿಳಿಸುವುದು ಮತ್ತು ಮುಂದಿನ ಕಂಪೌಂಡ ಗೋಡೆ ದುರಸ್ತಿಗೊಳಿಸಿ ಸುಣ್ಣ ಬಣ್ಣ ಹಚ್ಚುವ ಕಾಮಗಾರಿ ಭಾಗ-1 (ನಿಯಮ-71)**

<u>**ಟೆಂಡರನಲ್ಲಿ ಭಾಗವಹಿಸಿದ ಗುತ್ತಿಗೆದಾರರ ವಿವರ**</u>

| ಕ್ರ. ಸಂ | ಕಾಮಗಾರಿಯ ವಿವರ | ಟೆಂಡರನಲ್ಲಿ ಭಾಗವಹಿಸಿದ ಗುತ್ತಿಗೆದಾರರ ಹೆಸರು | ಇಎಂಡಿ ರೂ. | ಗುತ್ತಗೆದಾರರು ನಮೂದಿಸಿದ ದರ | ಷರಾ |
|---|---|---|---|---|---|
| 1 | 2 | 3 | 4 | 5 | 6 |
| 1 | ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ-ರುವ ಹಳೆಯ ಕ್ಯಾಂಟೀನ್ ಕಟ್ಟಡವನ್ನು ದುರಸ್ತಿ/ಸುಧಾರಣೆಗೊಳಿಸುವದು ಮತ್ತು ಮುಂದಿನ ಕಂಪೌಂಡ ಗೋಡೆ ದುರಸ್ತಿಗೊಳಿಸಿ ಸುಣ್ಣ ಬಣ್ಣ ಹಚ್ಚುವ ಕಾಮಗಾರಿ ಕೈಕೊಳ್ಳು-ವುದು ಭಾಗ-1 (ನಿಯಮ-71 ರಡಿ) | ಶ್ರೀ ಫಕ್ಕೀರೇಶ ಎಸ್. ರಗಟಿ ಸಾ: ಹುಲ್ಲೂರ | 2500 | 89138-41 | 1 ನೇ ಕಡಿಮೆ ದರ |
| | | ಶ್ರೀ ಕಲ್ಲಪ್ಪ ಎಂ. ಹಡಪದ ಸಾ: ಲಕ್ಮೇಶ್ವರ | 2500 | 91877-38 | 2 ನೇ ಕಡಿಮೆ ದರ |

ಮೇಲೆ ಹೇಳಿದ ಗುತ್ತಿಗೆದಾರರಲ್ಲಿ ಶ್ರೀ ಫಕ್ಕೀರೇಶ ಎಸ್. ರಗಟಿ ಗುತ್ತಿಗೆದಾರರು, ಸಾ: ಹುಲ್ಲೂರ, ಇವರು 1 ನೇ ಕಡಿಮೆ ದರ ನಮೂದಿಸಿದ ಗುತ್ತಿಗೆದಾರರಾಗಿದ್ದು, ಸದರಿಯವರ ದಾಖಲಾತಿಗಳನ್ನು ಪರಿಶೀಲಿಸಿ, ಕಾಮಗಾರಿಯನ್ನು ನೀಡುವ ಕುರಿತು ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಎಂ.ಡಿ.ಪಿ. ಗದಗ, ಇವರು ಮಾಡಿರುವ ಸಿಪ್ಪಾರಸ್ಸಿನನ್ವಯ, ಕೃಉಮಾಸ ಲಕ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಹಳೇಯ ಕ್ಯಾಂಟೀನ್ ಕಟ್ಟಡವನ್ನು ದುರಸ್ತಿ/ ಸುಧಾರಣೆಗೊಳಿಸುವುದು ಮತ್ತು ಮುಂದಿನ ಕಂಪೌಂಡ ಗೋಡೆ ದುರಸ್ತಿಗೊಳಿಸಿ ಸುಣ್ಣ ಬಣ್ಣ ಹಚ್ಚುವ ಕಾಮಗಾರಿ ಭಾಗ-1 (ನಿಯಮ-71 ರಡಿಯಲ್ಲಿ) ಕಾಮಗಾರಿಯನ್ನು ಕಡಿಮೆ ದರ ನಮೂದಿಸಿರುವ ಶ್ರೀ ಫಕ್ಕೀರೇಶ ಎಸ್. ರಗಟಿ ಗುತ್ತಿಗೆದಾರರು, ಸಾ: ಹುಲ್ಲೂರ, ಇವರು ಸೂಚಿಸಿದ ಮೊತ್ತ ರೂ. 89,138-41 ಗಳಿಗೆ ಒಪ್ಪಿ, ನಿರ್ಣಯಿಸಲಾಯಿತು. ಸದರಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲು ತೀರ್ಮಾನಿಸಲಾಯಿತು.

**ಕಾಮಗಾರಿ ಹೆಸರು:2) ಕೃಉಮಾಸ ಲಕ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಹಳೇಯ ಕ್ಯಾಂಟೀನ್ ಕಟ್ಟಡವನ್ನು ದುರಸ್ತಿ/ಸುಧಾರಣೆಗೊಳಿಸುವುದು ಮತ್ತು ಮುಂದಿನ ಕಂಪೌಂಡ ಗೋಡೆ ದುರಸ್ತಿಗೊಳಿಸಿ ಸುಣ್ಣ ಬಣ್ಣ ಹಚ್ಚುವ ಕಾಮಗಾರಿ ಭಾಗ-2 (ನಿಯಮ-71)**

<u>**ಟೆಂಡರನಲ್ಲಿ ಭಾಗವಹಿಸಿದ ಗುತ್ತಿಗೆದಾರರ ವಿವರ.**</u>

| ಕ್ರ. ಸಂ | ಕಾಮಗಾರಿಯ ವಿವರ | ಟೆಂಡರನಲ್ಲಿ ಭಾಗವಹಿಸಿದ ಗುತ್ತಿಗೆದಾರರ ಹೆಸರು | ಇಎಂಡಿ ರೂ. | ಗುತ್ತಗೆದಾರರು ನಮೂದಿಸಿದ ದರ | ಷರಾ |
|---|---|---|---|---|---|
| 1 | 2 | 3 | 4 | 5 | 6 |
| 1 | ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ-ರುವ ಹಳೆಯ ಕ್ಯಾಂಟೀನ್ ಕಟ್ಟಡವನ್ನು ದುರಸ್ತಿ/ಸುಧಾರಣೆಗೊಳಿಸುವದು ಮತ್ತು ಮುಂದಿನ ಕಂಪೌಂಡ ಗೋಡೆ ದುರಸ್ತಿಗೊಳಿಸಿ ಸುಣ್ಣ ಬಣ್ಣ ಹಚ್ಚುವ ಕಾಮಗಾರಿ ಕೈಕೊಳ್ಳುವುದು ಭಾಗ-2 (ನಿಯಮ-71 ರಡಿ) | ಶ್ರೀ ಫಕ್ಕೀರೇಶ ಎಸ್. ರಗಟಿ ಸಾ: ಹುಲ್ಲೂರ | 2500 | 89249-06 | 1 ನೇ ಕಡಿಮೆ ದರ |
| | | ಶ್ರೀ ಕಲ್ಲಪ್ಪ ಎಂ. ಹಡಪದ ಸಾ: ಲಕ್ಮೇಶ್ವರ | 2500 | 89,524-95 | 2 ನೇ ಕಡಿಮೆ ದರ |

ಮೇಲೆ ಹೇಳಿದ ಗುತ್ತಿಗೆದಾರರಲ್ಲಿ ಶ್ರೀ ಫಕ್ಕೀರೇಶ ಎಸ್. ರಗಟಿ ಗುತ್ತಿಗೆದಾರರು, ಸಾ: ಹುಲ್ಲೂರ, ಇವರು 1ನೇ ಕಡಿಮೆ ದರ ನಮೂದಿಸಿದ ಗುತ್ತಿಗೆದಾರರಾಗಿದ್ದು, ಸದರಿಯವರ ದಾಖಲಾತಿಗಳನ್ನು ಪರಿಶೀಲಿಸಿ, ಕಾಮಗಾರಿಯನ್ನು ನೀಡುವ ಕುರಿತು ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಎಂ.ಡಿ.ಪಿ. ಗದಗ, ಇವರು ಮಾಡಿರುವ ಸಿಪ್ಪಾರಸ್ಸಿನನ್ವಯ, ಕೃಉಮಾಸ ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಹಳೇಯ ಕ್ಯಾಂಟೀನ್ ಕಟ್ಟಡವನ್ನು ದುರಸ್ತಿ/ ಸುಧಾರಣೆಗೊಳಿಸುವುದು ಮತ್ತು ಮುಂದಿನ ಕಂಪೌಂಡ ಗೋಡೆ ದುರಸ್ತಿಗೊಳಿಸಿ ಸುಣ್ಣ ಬಣ್ಣ ಹಚ್ಚುವ ಕಾಮಗಾರಿ ಭಾಗ-2 (ನಿಯಮ-71 ರಡಿಯಲ್ಲಿ) ಕಾಮಗಾರಿಯನ್ನು ಕಡಿಮೆ ದರ ನಮೂದಿಸಿರುವ ಶ್ರೀ ಫಕ್ಕೀರೇಶ ಎಸ್. ರಗಟಿ ಗುತ್ತಿಗೆದಾರರು, ಸಾ: ಹುಲ್ಲೂರ, ಇವರು ಸೂಚಿಸಿದ ಮೊತ್ತ ರೂ. 89249-06 ಗಳಿಗೆ ಒಪ್ಪಿ, ನಿರ್ಣಯಿಸಲಾಯಿತು. ಸದರಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲು ತೀರ್ಮಾನಿಸಲಾಯಿತು.

ಸೂಚಕರು: ಶ್ರೀ ರಾಜಶೇಖರಪ್ಪ ಮಹಾಲಿಂಗಪ್ಪ ಕರೆಣ್ಣವರ
ಅನುಮೋದಕರು: ಶ್ರೀಮತಿ ಪಕ್ಕವ್ವ ಯಲ್ಲಪ್ಪ ಜೋಗಿ

ವಿಷಯ ನಂ-4) ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಖಾಲಿ ನಿವೇಶನಗಳನ್ನು ಟೆಂಡರ್ ಕಂ ಬಹಿರಂಗ ಹರಾಜು ಮೂಲಕ ಅರ್ಹ ಪೇಟೆ ಕಾರ್ಯಕರ್ತರಿಗೆ ಲೀಸ್ ಕಂ ಸೇಲ್ ಆಧಾರದ ಮೇಲೆ ಹಂಚಿಕೆ ಮಾಡುವ ಬಗ್ಗೆ.

ಠರಾವ ನಂ-4) ಲಕ್ಷ್ಮೇಶ್ವರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ, ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಖಾಲಿ ಇರುವ ನಿವೇಶನಗಳ ಸಂಖ್ಯೆ 7ಎ, 52, 92, 107, 108, 109, 110, 111 ಹಾಗೂ 112 ಹೀಗೆ ಒಟ್ಟು 09 ನಿವೇಶನಗಳನ್ನು 2004 ರ ಆಸ್ತಿ ಹಂಚಿಕೆ ನಿಯಮ 9ಬಿ ರನ್ವಯ ಪೇಟೆ ಕಾರ್ಯಕರ್ತರಿಗೆ ಲೀಸ್ ಕಂ ಸೇಲ್ ಆಧಾರದ ಮೇಲೆ ಟೆಂಡರ್ ಕಂ ಬಹಿರಂಗ ಹರಾಜು ಮುಖಾಂತರ ಹಂಚಿಕೆ ಮಾಡಲು ಮಾನ್ಯ ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಬೆಂಗಳೂರ, ಇವರ ಕಛೇರಿ ಪತ್ರ ಸಂಖ್ಯೆ/ಕೃಮಾಇ/ ಅಭಿವಿ-03/ಲೀಕಂಸೇ/347/2019 ದಿನಾಂಕ: 15-09-2020 ರಲ್ಲಿ ಮಂಜೂರಾತಿ ನೀಡಿರುವುದನ್ನು ಸಭೆಯಲ್ಲಿ ವಿವರಿಸಲಾಯಿತು. ಮುಂದುವರೆದು ಮಾರುಕಟ್ಟೆ ಪ್ರಾಂಗಣಗಳಲ್ಲಿ ಆಸ್ತಿ ಹಂಚಿಕೆ ನಿಯಮಗಳು 2004 ರನ್ವಯ ಹಂಚಿಕೆ ಮಾಡಬೇಕಾಗಿರುವ ನಿವೇಶನಗಳಲ್ಲಿ ನಿಯಮಾನುಸಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪೇಟೆ ಕಾರ್ಯಕರ್ತರಿಗಾಗಿ ನಿವೇಶನಗಳನ್ನು ಕಾಯ್ದಿರಿಸಿ, ಟೆಂಡರ್ ಕಂ ಬಹಿರಂಗ ಹರಾಜನ್ನು ಕರೆಯಬೇಕಾಗುತ್ತದೆಂದು ಸಭೆಯಲ್ಲಿ ಕಾರ್ಯದರ್ಶಿಯವರು ವಿವರಿಸಿರು.

ಸಭೆಯಲ್ಲಿ ಈ ಕುರಿತು ಕುಲಂಕೂಷವಾಗಿ ಚರ್ಚಿಸಲಾಯಿತು. ಹಂಚಿಕೆಗಾಗಿ ಮಂಜೂರಾತಿ-ಯಾಗಿರುವ 09 ನಿವೇಶನಗಳಲ್ಲಿ ನಿವೇಶನ ಸಂಖ್ಯೆ 111, ಪರಿಶಿಷ್ಟ ಜಾತಿಗಾಗಿ ಹಾಗೂ ನಿವೇಶನ ಸಂಖ್ಯೆ 52 ಪರಿಶಿಷ್ಟ ಪಂಗಡ ಪೇಟೆ ಕಾರ್ಯಕರ್ತರಿಗಾಗಿ ಕಾಯ್ದಿರಿಸಿ, ಉಳಿದ 07 ನಿವೇಶನಗಳನ್ನು ಸಾಮಾನ್ಯವಾಗಿ ಹೀಗೆ ಒಟ್ಟು 09 ನಿವೇಶನಗಳನ್ನು ನಿಯಮಾನುಸಾರ ಟೆಂಡರ್ ಕಂ ಬಹಿರಂಗ ಹರಾಜು ಮೂಲಕ ಹಂಚಿಕೆ ಕ್ರಮ ಜರುಗಿಸಲು ಒಪ್ಪಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಸೂಚಕರು: ಶ್ರೀಮತಿ ಮುತ್ತವ್ವ ಪರಸಪ್ಪ ಮಾಗಡಿ
ಅನುಮೋದಕರು: ಶ್ರೀ ವೆಂಕರಡ್ಡಿ ಬಸವರಡ್ಡಿ ಸ.ಹೊಂಬಳ

ವಿಷಯ ನಂ-5) ಶ್ರೀ ಮಂಜುನಾಥ ಹನಮಂತಪ್ಪ ಬಟ್ಟೂರ ಸಾ: ಲಕ್ಷ್ಮೇಶ್ವರ ಇವರು ಸಮಿತಿಯ ತೂಕದವರ ಲೈಸನ್ಸ್ ಮಂಜೂರು ಮಾಡಲು ವಿನಂತಿಸಿ ಸಲ್ಲಿಸಿರುವ ಅರ್ಜಿಯ ಕುರಿತು ವಿಚಾರ

ಠರಾವ ನಂ-5) ಪ್ರಸ್ತುತ ಯಾವುದೇ ಹೊಸ ತೂಕದವರ ಲೈಸನ್ಸ್‌ನ್ನು ನೀಡಬಾರದೆಂದು ಸಮಿತಿಗಳಿಗೆ ಸರ್ಕಾರದ ನಿರ್ದೇಶನ ಇರುವುದರಿಂದ ಸದರಿ ವಿಷಯವನ್ನು ಕೈಬಿಡಲು ನಿರ್ಣಯಿಸಲಾಯಿತು.

ಸೂಚಕರು: ಶ್ರೀ ಯಲ್ಲಪ್ಪಗೌಡ ಅಮೃತಗೌಡ ಉದ್ದನಗೌಡ್ರ
ಅನುಮೋದಕರು: ಶ್ರೀ ವಿರುಪಾಕ್ಷಪ್ಪ ಮಹದೇವಪ್ಪ ಮೇಟಿ

ವಿಷಯ ನಂ-6) 2020-21 ನೇ ಸಾಲಿನಿಂದ ಮುಂದಿನ ಅವಧಿಗೆ ಲೈಸನ್ಸ್ ಕೋರಿ ಬಂದ ಅರ್ಜಿಗಳನ್ನು ಪರಿಶೀಲಿಸಿ, ಮಂಜೂರಾತಿ ಮಾಡುವ ಕುರಿತು.

ಠರಾವ ನಂ-6) ಈ ಕೆಳಕಾಣಿಸಿದ ಅರ್ಜಿದಾರರು ಸಮಿತಿಯಿಂದ ಲೈಸನ್ಸ ಕೋರಿ ಅವಶ್ಯಕ ದಾಖಲಾತಿಗಳೊಂದಿಗೆ ನಿಗಧಿತ ನಮೂನೆಯಲ್ಲಿ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಿದ್ದು ಅವರುಗಳ ವಿವರವನ್ನು ಸಭೆಗೆ ಓದಿ ಹೇಳಲಾಯಿತು.

| ಕ್ರ.ಸಂ | ದಲ್ಲಾಲರ ವಿವರ ಮತ್ತು ವಿಳಾಸ | ಕೋರಿದ ಲೈಸನ್ಸ ವಿವರಗಳು |
|---|---|---|
| 1 | ಶ್ರೀ ಸಿದ್ದಾರೋಡ ಟ್ರೇಡಿಂಗ್ ಕಂಪನಿ, ಪ್ರೋ: ಮುತ್ತಪ್ಪ ಪುಟ್ಟಪ್ಪ ಕಳ್ಳಿಹಾಳ ಸಾ: ಲಕ್ಷ್ಮೇಶ್ವರ | ದಲ್ಲಾಲಿ |
| 2 | ಮೆ: ಆರ್. ವ್ಹಿ ವಡಕಣ್ಣವರ & ಸನ್ಸ್, ಪ್ರೋ: ರುದ್ರಪ್ಪ ವೀ. ವಡಕಣ್ಣವರ ಸಾ: ಲಕ್ಷ್ಮೇಶ್ವರ | ದಲ್ಲಾಲಿ |

| ಕ್ರ ಸಂ | ವರ್ತಕರ ಹೆಸರು ಮತ್ತು ವಿವರ | ರಪ್ತುದಾರರು | ಆಮದುದಾರರು | ಸಂಗ್ರಣಗಾರರು | ಸಂಸ್ಕರಣಕಾರರು | ಕ್ರಷರ್ | ಜಿನ್ನರ್ | ಪ್ರೆಸರ್ |
|---|---|---|---|---|---|---|---|---|
| 1 | ಶ್ರೀ ಅಡರಕಟ್ಟಿ ಬಸವೇಶ್ವರ ಸಾ: ಲಕ್ಷ್ಮೇಶ್ವರ | 01 | 01 | 01 | – | – | – | – |

ಸಭೆಯಲ್ಲಿ ಈ ಕುರಿತು ಕೂಲಂಕುಷವಾಗಿ ಪರಿಶೀಲಿಸಿ ಮೇಲ್ಕಾಣಿಸಿದ ದಲ್ಲಾಲರು ಮತ್ತು ಇನ್ನಿತರ ಲೈಸನ್ಸಗಳನ್ನು 10 ವರ್ಷದ ಅವಧಿಗೆ ಲೈಸನ್ಸ ಮಂಜೂರು/ನವೀಕರಣ ಮಾಡಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಸೂಚಕರು: ಶ್ರೀಸೋಮಪ್ಪ ಮೇಘಪ್ಪ ಲಮಾಣಿ
ಅನುಮೋದಕರು: ಶ್ರೀ ಚಂದ್ರಶೇಖರ ಮಹದೇವಪ್ಪ ತಳವಾರ

ವಿಷಯ ನಂ-7) ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು

ವಿಷಯ ನಂ-7(1) ಸಮಿತಿಯ ಹಳೇಯ ಆಡಳಿತ ಕಛೇರಿ ಕಟ್ಟಡವನ್ನು ಉಪನೋಂಧಣಾಧಿಕಾರಿಗಳ ಕಛೇರಿ ಲಕ್ಷ್ಮೇಶ್ವರ ಇವರಿಗೆ ಲೀವ್ಹ & ಲೈಸನ್ಸ್ ಫೀ ಆಧಾರದ ಮೇಲೆ ಹಂಚಿಕೆ ಮಾಡುವ ಕುರಿತು.

ಠರಾವ ನಂ-7(1) ಮಾನ್ಯ ಉಪನೊಂಧಣಾಧಿಕಾರಿಗಳು ಲಕ್ಷ್ಮೇಶ್ವರ ಇವರು ತಮ್ಮ ಪತ್ರ ಸಂಖ್ಯೆ/ಉ.ನೊ.ಕ.ಲ/ಕಟ್ಟಡ/5/2020-21 ದಿನಾಂಕ: 19-10-2020 ರಲ್ಲಿ ಸಮಿತಿಯ ಹಳೇಯ ಆಡಳಿತ ಕಛೇರಿ ಕಟ್ಟಡವನ್ನು ಉಪನೊಂಧಣಾಧಿಕಾರಿಗಳ ಕಛೇರಿಗಾಗಿ ಲೀವ್ಹ್ & ಲೈಸನ್ಸ್ ಫೀ ಆಧಾರದ ಮೇಲೆ ಹಂಚಿಕೆ ಮಾಡಲು ವಿನಂತಿಸಿಕೊಂಡು ಸಲ್ಲಿಸಿರುವ ಪತ್ರವನ್ನು ಹಾಗೂ ಮಾನ್ಯ ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಬೆಂಗಳೂರ ಇವರಿಂದ ಅನುಮೋದಿತ ಸದರಿ ಕಟ್ಟಡದ ಲೀವ್ಹ್ & ಲೈಸನ್ಸ್ ಫೀ ದರದಂತೆ ಕಟ್ಟಡವನ್ನು ಪಡೆಯಲು ಒಪ್ಪಿ ಸಲ್ಲಿಸಿರುವ ಪತ್ರ ದಿನಾಂಕ: 17-11-2020 ನ್ನು ಸಹ ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತರಲಾಯಿತು. ಮುಂದುವರೆದು ಸದರಿ ಕಟ್ಟಡಕ್ಕೆ ಮಾಸಿಕ ರೂ. 5,700-00 ಗಳ ಲೀವ್ಹ & ಲೈಸನ್ಸ್ ಫೀ ನಿಗಧಿಯಾಗಿರುತ್ತದೆಂದು ಸಭೆಯಲ್ಲಿ ಅವಲೋಕಿಸಲಾಯಿತು.

ಸಭೆಯಲ್ಲಿ ಈ ಕುರಿತು ಕುಲಂಕೂಷವಾಗಿ ಚರ್ಚಿಸಲಾಯಿತು, ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಸಮಿತಿಯ ಹಳೇಯ ಕಛೇರಿ ಕಟ್ಟಡವು ಸುಮಾರು ವರ್ಷಗಳಿಂದ ಖಾಲಿ ಇರುವುದನ್ನು ಮನಗಾಣಲಾಯಿತು. ಪ್ರಸ್ತುತ ಸದರಿ ಕಟ್ಟಡವನ್ನು ಸರ್ಕಾರದ ಉಪನೊಂಧಣಾಧಿಕಾರಿಗಳ ಕಛೇರಿ ಲಕ್ಷ್ಮೇಶ್ವರ ಇವರಿಗೆ ಹಂಚಿಕೆ ಮಾಡುವುದರಿಂದ ಸಮಿತಿಗೆ ಆದಾಯವು ಆಗುವುದು ಮತ್ತು ಕಟ್ಟಡವು ಸಹ ಸುಸ್ಥಿತಿಯಲ್ಲಿ ಇರಬಹುದಾಗಿದೆಂದು ಮನಗಾಣಲಾಯಿತು. ಇಲಾಖೆಯ ತಾಂತ್ರಿಕ ವಿಭಾಗದವರಿಂದ ನಿಗಧಿಯಾದ ಮಾಸಿಕ ಲೀವ್ & ಲೈಸನ್ಸ್ ಫೀ ರೂ.5700-00 ರಂತೆ ಸಮಿತಿಯ ಹಳೇಯ ಕಛೇರಿ ಕಟ್ಟಡವನ್ನು ಉಪನೊಂಧಣಾಧಿಕಾರಿಗಳು ಲಕ್ಷ್ಮೇಶ್ವರ ಇವರಿಗೆ ಲೀವ್ಹ್ & ಲೈಸನ್ಸ್ ಫೀ ಆಧಾರದ ಮೇಲೆ ಹಂಚಿಕೆ ಮಾಡಲು ಒಪ್ಪಿ, ಈ ಕುರಿತು ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರ ಇವರಿಂದ ಮಂಜೂರಾತಿ ಪಡೆಯಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಸೂಚಕರು: ಶ್ರೀ ಗುಡದಯ್ಯ ರಾಮಪ್ಪ ಕೊಪ್ಪದ
ಅನುಮೋದಕರು: ಶ್ರೀ ಮಲ್ಲನಗೌಡ ಶಂಕರಗೌಡ ಪಾಟೀಲ

ವಿಷಯ ನಂ-7(2) ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಡೆಯುವ ತರಕಾರಿ ಲೀಲಾವಿನ ಸಮಯ ನಿಗಧಿಪಡಿಸುವ ಕುರಿತು.

ಠರಾವ ನಂ-7(2) ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ತರಕಾರಿ ಮಾರಾಟದ ಲೀಲಾವಿನ ಪ್ರಕ್ರೀಯೆಯು ಪ್ರತಿನಿತ್ಯ ಬೆಳಗಿನ ಸಮಯದಲ್ಲಿ ನಡೆಯುತ್ತಿತ್ತು. ಕೋವಿಡ್-19ರ ಸಮಯದಲ್ಲಿ ಮಾರುಕಟ್ಟೆ ಪ್ರಾಂಗಣದಲ್ಲಿ ಸಾಮಾಜಿಕ ಅಂತರವನ್ನು ಕಾಯುವ ದೃಷ್ಠಯಿಂದ ಮತ್ತು ಜನಜಂಗುಳಿ ತಪ್ಪಿಸುವ ಬಗ್ಗೆ ಲೀಲಾವಿನ ಸಮಯವನ್ನು ಸಾಯಂಕಾಲ ಮಾಡಲಾಗಿತ್ತು. ಪ್ರಸ್ತುತ ಲಕ್ಷ್ಮೇಶ್ವರ ತಾಲೂಕಿನ ಕೆಲವೊಂದು

ತರಕಾರಿ ಬೆಳೆಯುವ ರೈತರು ತರಕಾರಿಯ ಹರಾಜು ಸಾಯಂಕಾಲ ಮಾಡುವುದರಿಂದ ತರಕಾರಿಗಳಿಗೆ ಸೂಕ್ತವಾದ ಬೆಲೆ ಸಿಗುತ್ತಿಲ್ಲವೆಂದು, ತರಕಾರಿ ಹರಾಜು ಪ್ರಕ್ರೀಯೆನ್ನು ಬೆಳಿಗ್ಗೆ 9-00 ಗಂಟೆಗೆ ನಿಗಧಿಗೊಳಿಸಬೇಕೆಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅದರಂತೆಯೆ ಕೆಲವೊಂದು ಜನ ರೈತರು ಮುಂಜಾನೆಯೆ ಹೊಲಗಳಿಂದ ತರಕಾರಿ ಹರಿದುತಂದು ಮುಂಜಾನೆಯ ವೇಳೆಯಲ್ಲಿ ಹರಾಜು ಸಮಯಕ್ಕೆ ಬರಲು ಅನಾನುಕೂಲತೆಯಾಗುತ್ತದೆಂದು ಕಾರಣ ಹರಾಜು ಪ್ರಕ್ರೀಯೆಯನ್ನು ಸಾಯಂಕಾಲವೆ ಜರುಗಿಸಬೇಕೆಂದು ವಿನಂತಿಸಿ ಸಲ್ಲಿಸಿರುವ 02 ಅರ್ಜಿಗಳನ್ನು ಸಭೆಯಲ್ಲಿ ಅವಲೋಕಿಸಲಾಯಿತು. ಮುಂದುವರೆದು ಮಾನ್ಯ ತಹಶೀಲ್ದಾರರು ಲಕ್ಷ್ಮೇಶ್ವರ ಇವರು ತಮ್ಮ ಆದೇಶ ಪತ್ರ ದಿ: 06-11-2020 ರಲ್ಲಿ ಮಾರುಕಟ್ಟೆ ಪ್ರಾಂಗಣಲ್ಲಿ ತರಕಾರಿ ಹರಾಜನ್ನು ಬೆಳಿಗ್ಗೆ 6-00 ರಿಂದ 8-00 ಗಂಟೆಯವರೆಗೆ ಜರುಗಿಸಲು ಆದೇಶಿಸಿರುವುದನ್ನು ಸಹ ಸಭೆಯಲ್ಲಿ ಅವಲೋಕಿಸಲಾಯಿತು.

ಸಭೆಯಲ್ಲಿ ಈ ಕುರಿತು ಕುಲಂಕೂಷವಾಗಿ ಚರ್ಚಿಸಿ, ಲಕ್ಷ್ಮೇಶ್ವರ ಸುತ್ತ ಮುತ್ತ ಇರುವ ಹಾವೇರಿ, ರಾಣೆಬೆನ್ನೂರ, ಗದಗ ಹಾಗೂ ಹುಬ್ಬಳ್ಳಿಗಳಲ್ಲಿ ತರಕಾರಿ ಹರಾಜು ಪ್ರಕ್ರೀಯೆ ಬೆಳಗಿನ ಸಮಯದಲ್ಲಿ ಜರುಗುತ್ತಿರುವುದನ್ನು ಅವಲೋಕಿಸಿ, ಸಾಯಂಕಾಲದ ಸಮಯದಲ್ಲಿ ಹರಾಜು ಜರುಗಿಸುವುದರಿಂದ ರೈತರು ಬೆಳೆದಂತ ತರಕಾರಿಗೆ ಸೂಕ್ತ ಬೆಲೆ ಸಿಗುವುದಿಲ್ಲವೆಂದು ಮನಗಂಡು ಹಾಗೂ ಬೆಳಗಿನ ಸಮಯದಲ್ಲಿ ಹರಾಜು ಜರುಗಿಸುವುದರಿಂದ ಗ್ರಾಹಕರಿಗೆ ಮತ್ತು ತರಕಾರಿ ಕೊಳ್ಳುವವರಿಗೆ ತಾಜಾ ತರಕಾರಿ ಸಿಗುವುದೆಂದು ಮನಗಂಡು ಲಕ್ಷ್ಮೇಶ್ವರ ಮಾರುಕಟ್ಟೆ ಪ್ರಾಂಗಣದಲ್ಲಿ ತರಕಾರಿ ಹರಾಜನ್ನು ದಿನಾಂಕ: 01-12-2020 ರಿಂದ ಬೆಳಿಗ್ಗೆ 8-00 ರಿಂದ 10-00 ಗಂಟೆಯವರೆಗೆ ಜರುಗಿಸಲು ಒಪ್ಪಿ ನಿರ್ಣಯಿಸಲಾಯಿತು.

ಸೂಚಕರು: ಶ್ರೀ ಷಣ್ಮುಖಗೌಡ ಪ್ರಭುಗೌಡ ಪಾಟೀಲ
ಅನುಮೋದಕರು: ಶ್ರೀ ರಾಜಶೇಖರಪ್ಪ ಮಹಾಲಿಂಗಪ್ಪ ಕರೆಣ್ಣವರ

ವಿಷಯ ನಂ-7(3) 2021 ನೇ ಸಾಲಿಗೆ ಸಮಿತಿಗೆ ಹಾಗೂ ಮಾರುಕಟ್ಟೆ ಪ್ರಾಂಗಣಕ್ಕೆ ರಜಾ ದಿನಗಳನ್ನು ಘೋಷಿಸುವ ಕುರಿತು.

ಠರಾವ ನಂ-7(3) 2021 ನೇ ಸಾಲಿಗೆ ಸಮಿತಿಯ ಕಚೇರಿಯ ಹಾಗೂ ಮಾರುಕಟ್ಟೆಗೆ ಸಾರ್ವತ್ರಿಕ ರಜೆ ಘೋಷಿಸುವ ಕುರಿತು ಸಮಿತಿಯಲ್ಲಿ ಚರ್ಚಿಸಲಾಯಿತು. 2021 ನೇ ಸಾಲಿಗಾಗಿ ಸರ್ಕಾರದಿಂದ ನಿಗಧಿಪಡಿಸಿದ ರಜಾ ದಿನಗಳನ್ನು ಹಾಗೂ ಸ್ಥಾನಿಕ ರಜಾ ದಿನಗಳನ್ನು ಹಾಗೂ ಪ್ರತಿ ತಿಂಗಳು 2 ನೇ ಶನಿವಾರದ ಬದಲಾಗಿ ಪ್ರತಿ ಅಮವಾಸೆಯ ದಿನದಂದು ಕಚೇರಿಗೂ ಹಾಗೂ ವ್ಯಾಪಾರ ವಹಿವಾಟಿಗೂ ಈ ಕೆಳಗಿನಂತೆ ರಜೆ ಘೋಷಿಸಲು ಮಂಜೂರಾತಿ ನೀಡಲಾಯಿತು.

| ಕ್ರ.ಸಂ. | ದಿನಾಂಕ | ವಾರ | ಸಾರ್ವತ್ರಿಕ ರಜಾ |
|---|---|---|---|
| 1. | 14-01-2021 | ಗುರುವಾರ | ಉತ್ತರಾಯಣ ಪುಣ್ಯಕಾಲ ಮಕರ ಸಂಕ್ರಾಂತಿ ಹಬ್ಬ |
| 2. | 26-1-2021 | ಮಂಗಳವಾರ | ಗಣರಾಜ್ಯೋತ್ಸವ |
| 3. | 11-03-2021 | ಗುರುವಾರ | ಮಹಾ ಶಿವರಾತ್ರಿ |
| 4. | 02-04-2021 | ಶುಕ್ರವಾರ | ಗುಡ್ ಫ್ರೈಡೆ, |
| 5. | 13-04-2021 | ಮಂಗಳವಾರ | ಯುಗಾದಿ ಹಬ್ಬ |
| 6. | 14-04-2021 | ಬುಧವಾರ | ಡಾ: ಬಿ.ಆರ್.ಅಂಬೇಡ್ಕರ ಜಯಂತಿ |
| 7. | 01-05-2021 | ಶನಿವಾರ | ಕಾರ್ಮಿಕ ದಿನಾಚರಣೆ |
| 8. | 14-05-2021 | ಶುಕ್ರವಾರ | ಬಸವಜಯಂತಿ/ಕುತುಬ್ ಎ ರಂಜಾನ್ |
| 9. | 21-07-2021 | ಬುಧವಾರ | ಬಕ್ರೀದ್ |
| 10. | 20-08-2021 | ಶುಕ್ರವಾರ | ಮೊಹರಂ ಕಡೆಯ ದಿನ |
| 11. | 10-09-2021 | ಶುಕ್ರವಾರ | ವರಸಿದ್ದಿ ವಿನಾಯಕ ಜಯಂತಿ |
| 12. | 02-10-2021 | ಶನಿವಾರ | ಗಾಂಧಿ ಜಯಂತಿ |
| 13. | 06-10-2021 | ಬುಧವಾರ | ಮಹಾಲಯ ಅಮವಾಸೆ |
| 14. | 14-10-2021 | ಗುರುವಾರ | ಮಹಾನವಮಿ/ಆಯುಧ ಪೂಜೆ |
| 15. | 15-10-2021 | ಶುಕ್ರವಾರ | ವಿಜಯದಶಮಿ |
| 16. | 20-10-2021 | ಬುಧವಾರ | ಮಹರ್ಷಿ ವಾಲ್ಮೀಕಿ ಜಯಂತಿ, ಈದ ಮೀಲಾದ್ |
| 17. | 01-11-2021 | ಸೋಮವಾರ | ಕನ್ನಡ ರಾಜ್ಯೋತ್ಸವ |
| 18. | 03-11-2021 | ಬುಧವಾರ | ನರಕ ಚತುರ್ದಶಿ |
| 19. | 05-11-2021 | ಶುಕ್ರವಾರ | ಬಲಿಪಾಡ್ಯಮಿ, ದೀಪಾವಳಿ |
| 20. | 22-11-2021 | ಸೋಮವಾರ | ಕನಕದಾಸ ಜಯಂತಿ. |

**ಸ್ಥಾನಿಕ ರಜಾ ದಿನಗಳು**

| | | | |
|---|---|---|---|
| 1 | ಮುಕ್ತಿ ಮಂದಿರ ಮಹಾಸ್ವಾಮಿಗಳ ರಥೋತ್ಸವ | 7 | ಭಾರತ ಹುಣ್ಣಿಮೆ |
| 2 | ಸೋಮೇಶ್ವರ ಜಾತ್ತೆ | 8 | ದೂದ ಫೀರಾ ಉರುಸು |
| 3 | ಶಿರಹಟ್ಟಿ ಫಕ್ಕೀರೇಶ್ವರ ಜಾತ್ರೆ | 9 | ಮುಕ್ತಿಮಂದಿರ ರಂಭಾಪೂರಿ ಜಗದ್ಗುರುಗಳ ಪುಣ್ಯ ತಿಥಿ |
| 4 | ಕೋಡಿಯಲ್ಲಮ್ಮ ಜಾತ್ರೆ | 10 | ನಾಗರ ಪಂಚಮಿ |
| 5 | ಹೊಳಲಮ್ಮದೇವಿ ಜಾತ್ರೆ | 11 | ಕಡೆಯ ಶ್ರಾವಣ ಸೋಮವಾರ |
| 6 | ರಂಗ ಪಂಚಮಿ | 12 | ಕಾರ ಹುಣ್ಣಿಮೆ |

ಸೂಚಕರು: ಯಲ್ಲಪ್ಪಗೌಡ ಅಮೃತಗೌಡ ಉದ್ದನಗೌಡ್ರ
ಅನುಮೋದಕರು: ವೀರುಪಾಕ್ಷಪ್ಪ ಮಹದೇವಪ್ಪ ಮೇಟಿ

ಈ ರೀತಿ ಕಾರ್ಯಕಲಾಪಗಳು ಜರುಗಿ ಸಭೆಯು ಮುಕ್ತಾಯವಾಯಿತು.

ಸಹಿ/–
ಕಾರ್ಯದರ್ಶಿ
ಕೃ.ಉ.ಮಾ.ಸ.,ಲಕ್ಷ್ಮೇಶ್ವರ

ಸಹಿ/–
ಅಧ್ಯಕ್ಷರು
ಕೃ.ಉ.ಮಾ.ಸ.,ಲಕ್ಷ್ಮೇಶ್ವರ

'ನಕಲು ಪ್ರತಿ'



ಕಾರ್ಯದರ್ಶಿ
ಕೃ.ಉ.ಮಾ.ಸ ಲಕ್ಷ್ಮೇಶ್ವರ